ದಿನಾಂಕಃ 22-09-2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲುಃ 3 ಮತ್ತು 4 ನೇ ಪ್ರತಿವಾದಿಯರ ಪರಃ ಶ್ರೀ ಡಿ ಎಸ್ ಆರ್ ವಕೀಲರಿಂದಃ

ನನ್ನ ತಂದೆಯ ತಂದೆ ಗವಿಯಪ್ಪರವರಿಗೆ 3 ಕಡೆ ಜಮೀನುಗಳು, ಎರಡು ಮನೆಗಳು, 4 ಅಂಗಡಿಗಳು ಇದ್ದವು. ನನ್ನ ತಾತನಿಗೆ ಸದರಿ ಸ್ವತ್ತುಗಳು ಅವರ ತಂದೆಯಿಂದ ಬಂದಿದ್ದವು. ನನ್ನ ಮುತ್ತಾತನಿಂದ ನನ್ನ ತಾತನಿಗೆ ಆಸ್ತಿಗಳು ಬಂದಿದ್ದವು ಎಂದು ತೋರಿಸಲು ದಾಖಲಾತಿ ಹಾಜರುಪಡಿಸಿದ್ದೇನೆ. ನನ್ನ ತಾತನಿಗೆ ಇಬ್ಬರು ಗಂಡು ಮಕ್ಕಳು, ಇಬ್ಬರು ಹೆಣ್ಣು ಮಕ್ಕಳು. ನನ್ನ ತಂದೆ ಕಿರಿಯ ಮಗ ಎಂದರೆ ಸರಿ. ನನ್ನ ತಾತ ತೀರಿಹೋದ ನಂತರ ನನ್ನ ದೊಡ್ಡಪ್ಪ ಮತ್ತು ನನ್ನ ತಂದೆ ಜಂಟಿ ಕುಟುಂಬದಲ್ಲಿ ಇದ್ದರು. ನನ್ನ ದೊಡ್ಡಪ್ಪನ ಮಗಳು ಭಾಗ್ಯಲಕ್ಷ್ಮ್ಮ ರವರಿಗೆ ಹೃದಯ ಕಾಯಿಲೆ ಇತ್ತು ಅದರಿಂದಾಗಿ ಅವರು 2015 ರಲ್ಲಿ ತೀರಿ ಹೋದರು. ಅವರಿಗೆ ಬೆಂಗಳೂರಿನ ಜಯದೇವ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗಿತ್ತು. ಜಯದೇವ ಆಸ್ಪತ್ರೆ ಸರ್ಕಾರಿ ಆಸ್ಪತ್ರೆ ಆಗಿರುವ ಕಾರಣ ಅವರ ಚಿಕಿತ್ಸೆಗೆ ಸ್ವಲ್ಪ ಹಣ ಮಾತ್ರ ಖರ್ಚಾಗಿದೆ. ಭಾಗ್ಯಲಕ್ಷ್ಮ್ಮ ರವರ ಮದುವೆ ಆಗಿತ್ತು. ಆದರೆ ಅವರ ಗಂಡ ಅವರ ಜೊತೆ ಇರಲಿಲ್ಲ. ಅವರಿಗೆ ಮಕ್ಕಳು ಇರಲಿಲ್ಲ.

ನನ್ನ ತಾತನಿಗೆ ಸರ್ವೆ ನಂ. 45/2 ರಲ್ಲಿ 1 ಎಕರೆ 2 ವರೆ ಗುಂಟೆ, ಸರ್ವೆ ನಂ. 18 ರಲ್ಲಿ 12 ಗುಂಟೆ ಮತ್ತು ಒಂದು ಮನೆ ಮಾತ್ರ ಇತ್ತು ಎಂದರೆ ಸಾಕ್ಷಿ 45/2 ರಲ್ಲಿ 39 ಗುಂಟೆ, ಸರ್ವೆ ನಂ. 18/1 ಬಿ ರಲ್ಲಿ 12 ಗುಂಟೆ, ಸರ್ವೆ ನಂ. 43 ರಲ್ಲಿ 1 ಎಕರೆ 19

ಗುಂಟೆ, ಎರಡು ಮನೆಗಳು ಮತ್ತು 4 ಅಂಗಡಿಗಳು ಇದ್ದವು ಎಂದು ಹೇಳುತ್ತಾರೆ. ಸರ್ವೆ ನಂ 45/2 ರಲ್ಲಿನ 1 ಎಕರೆ 2 ವರೆ ಗುಂಟೆ ಮತ್ತು ಸರ್ವೆ ನಂ 18 ರಲ್ಲಿನ 18 ಗುಂಟೆ ಮತ್ತು ಒಂದು ಮನೆ ನನ್ನ ತಾತನ ಸ್ವಯಾರ್ಜಿತ ಸ್ವತ್ತುಗಳು ಎಂದರೆ ಸರಿಯಲ್ಲ. ನನ್ನ ತಾತ ದಿಃ 16.10.1981 ರಂದು ಮೇಲಿನ ಎರಡೂ ಸ್ವತ್ತುಗಳನ್ನು ತನ್ನ ಗಂಡು ಮಕ್ಕಳಾದ ನನ್ನ ದೊಡ್ಡಪ್ಪ ಮತ್ತು ನನ್ನ ತಂದೆ ಗೆ ವಿಲ್ ಮೂಲಕ ಬರೆದುಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಮರಣ ಶಾಸನದಲ್ಲಿ ಸರ್ವೆ ನಂ. 45/2 ರಲ್ಲಿನ ಜಮೀನನ್ನು ಮತ್ತು ಮನೆಯ ಪೈಕಿ 37X40 ಅಳತೆಯ ಭಾಗವನ್ನು ನನ್ನ ದೊಡ್ಡಪ್ಪನ ಪರವಾಗಿ ಬರೆದಿದ್ದಾರೆ ಎಂದರೆ ನನಗೆ ಗೊತಿತಲ್ಲ. ಅದೇ ರೀತಿ ನನ್ನ ತಂದೆಗೆ ಸರ್ವೆ ನಂ. 18 ರಲ್ಲಿನ ಸ್ವತ್ತನ್ನು ಮತ್ತು ಮನೆಯಲ್ಲಿ 40X 40 ಭಾಗವನ್ನು ವಿಲ್ ನಲ್ಲಿ ಬರೆದು ಇಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಲ್ ಪ್ರಕಾರ ನನ್ನ ದೊಡ್ಡಪ್ಪ ಮತ್ತು ನನ್ನ ತಂದೆ ಅವರವರಿಗೆ ಬಂದ ಸ್ವತ್ತುಗಳಲ್ಲಿ ಪ್ರತ್ಯೇಕ ಸ್ವಾಧೀನದಲ್ಲಿ ಇದ್ದರು ಎಂದರೆ ಸರಿಯಲ್ಲ. ಅದೇ ರೀತಿ ವಿಲ್ ಪ್ರಕಾರ ಅವರ ಹೆಸರುಗಳಿಗೆ ಪ್ರತ್ಯೇಕ ಖಾತೆ ಪಹಣಿ ಆಗಿತ್ತು ಎಂದರೆ ಸರಿಯಲ್ಲ.

ಉಳಿದ ಸ್ವತ್ತುಗಳನ್ನು ನನ್ನ ದೊಡ್ಡಪ್ಪ ಸ್ವಯಾರ್ಜಿತವಾಗಿ ಸಂಪಾದನೆ ಮಾಡಿದ್ದಾರೆ ಎಂದರೆ ಸರಿಯಲ್ಲ. ನನ್ನ ದೊಡ್ಡಪ್ಪ ದಿಃ 06.03.2003 ರಂದು ತನ್ನ ಮಗಳಾದ ಭಾಗ್ಯಲಕ್ಷ್ಮ, 1 ನೇ ಪ್ರತಿವಾದಿ, ನನ್ನ ದೊಡ್ಡಪ್ಪನ ಹೆಂಡತಿಯ ತಮ್ಮ ಮಂಜುನಾಥನ ಪರವಾಗಿ ತನ್ನ ಎಲ್ಲಾ ಸ್ವಯಾರ್ಜಿತ ಸ್ವತ್ತುಗಳನ್ನು ವಿಲ್ ಮೂಲಕ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಈ

ದಾವಾ ಐಟಂ ನಂ. 4 ರಿಂದ 6 ಕ್ಕೆ ಸಂಬಂಧಪಟ್ಟಂತೆ ಸದರಿ ವಿಲ್ಲನ್ನು ಬರೆದಿದ್ದಾರೆ ಎಂದರೆ ಸರಿಯಲ್ಲ. ಸದರಿ ವಿಲ್ ಪ್ರಕಾರ 1 ನೇ ಪ್ರತಿವಾದಿಗೆ ಮತ್ತು ಮಂಜುನಾಥನಿಗೆ ಸರ್ವೆ ನಂ 3 ರಲ್ಲಿ ತಲಾ 29 ಗುಂಟೆ ಸ್ವತ್ತನ್ನು ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನನ್ನ ದೊಡ್ಡಪ್ಪ ತೀರಿ ಹೋದ ನಂತರ ಮರಣಶಾಸನದ ಪ್ರಕಾರ ಅವರ ಮಗಳು, 1 ನೇ ಪ್ರತಿವಾದಿ ಮತ್ತು ಮಂಜುನಾಥ ಅವರವರಿಗೆ ಬಂದ ಸ್ವತ್ತುಗಳಲ್ಲಿ ಪ್ರತ್ಯೇಕ ಸ್ವಾಧೀನದಲ್ಲಿ ಇದ್ದರು ಎಂದರೆ ಸರಿಯಲ್ಲ. ಈ ದಾವೆಯ ದಾವಾ ಐಟಂ ನಂ. 4 ರಿಂದ 6 ನ್ನು ಮರಣಶಾಸನ ಪತ್ರದಲ್ಲಿ ಭಾಗ್ಯಲಕ್ಷ್ಮಮ್ಮರವರಿಗೆ ಬರೆಯಲಾಗಿತ್ತು ಕಾರಣ ಸದರಿ ಸ್ವತ್ತುಗಳು ಅವರ ಸ್ವಯಾರ್ಜಿತ ಸ್ವತ್ತುಗಳು ಎಂದರೆ ಸರಿಯಲ್ಲ.

ಭಾಗ್ಯಲಕ್ಷ್ಮಮ್ಮ ಅವರ ಗಂಡ ಬಿಟ್ಟು ಹೋಗಿದ್ದ ಕಾರಣ ಮತ್ತು ಅವರಿಗೆ ಯಾರಾ ಸಹಾಯವೂ ಇಲ್ಲದ ಕಾರಣ ತನ್ನ ತಂದೆ ತೀರಿ ಹೋದ ನಂತರ ಭಾಗ್ಯಲಕ್ಷ್ಮಮ್ಮ ದಾವಾ ಐಟಂ ನಂ. 4 ನ್ನು 3 ನೇ ಪ್ರತಿವಾದಿಗೆ ಮತ್ತು ದಾವಾ ಐಟಂ ನಂ. 5 ಮತ್ತು 6 ನ್ನು 4 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಕ್ರಯ ಪತ್ರದ ಪ್ರಕಾರ 3 ನೇ ಪ್ರತಿವಾದಿ ಹೆಸರಿಗೆ ದಾವಾ ಐಟಂ ನಂ. 4 ಖಾತೆ ಆಗಿದೆ ಮತ್ತು ಅದೇ ರೀತಿ ದಾವಾ ಐಟಂ ನಂ. 5 ಮತ್ತು 6 ರ ಖಾತೆ 3 ನೇ ಪ್ರತಿವಾದಿ ಹೆಸರಿಗೆ ಆಗಿದೆ ಮತ್ತು ಅದರಂತೆ ಅವರು ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ತದನಂತರ 3 ನೇ ಪ್ರತಿವಾದಿ 4 ನೇ ಐಟಂ ಪೈಕಿ 10 ಗುಂಟೆ ಸ್ವತ್ತನ್ನು 5 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ

ಗೊತ್ತಿಲ್ಲ. ಅದೇ ರೀತಿ 4 ನೇ ಪ್ರತಿವಾದಿ 5 ನೇ ಪ್ರತಿವಾದಿಗೆ ಐಟಂ ನಂ 5 ನ್ನು ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಉಳಿದ ಜಮೀನುಗಳು 3 ಮತ್ತು 4 ನೇ ಪ್ರತಿವಾದಿಯರ ಸ್ವಾಧೀನದಲ್ಲಿ ಇವೆ ಎಂದರೆ ಸರಿಯಲ್ಲ.

ದಾವಾ ಐಟಂ ನಂ. 4 ರಿಂದ 6 ನಮ್ಮ ಕುಟುಂಬದ ಪಿತ್ರಾರ್ಜಿತ ಅಥವಾ ಒಟ್ಟುಕುಟುಂಬದ ಸ್ವತ್ತುಗಳು ಅಲ್ಲ ಎಂದರೆ ಸರಿಯಲ್ಲ. ನನ್ನ ಅಣ್ಣ 1 ನೇ ಪ್ರತಿವಾದಿ ಕೂಡ 3 ಮತ್ತು 4 ನೇ ಪ್ರತಿವಾದಿಯರ ಪರ ಆದ ಕ್ರಯ ಪತ್ರಗಳಿಗೆ ಒಪ್ಪಿಗೆ ಸಹಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಐಟಂ ನಂ. 4 ರಿಂದ 6 ಭಾಗ್ಯಲಕ್ಷ್ಮಮ್ಮರವರ ಸ್ವಯಾರ್ಜಿತ ಸ್ವತ್ತುಗಳು ಎಂಬ ಸಂಗತಿ ನನಗೆ ಗೊತ್ತಿದ್ದರೂ ಕೂಡ ಈ ದಾವೆ ಸಲುವಾಗಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ

(ತೆ. ನ್ಯಾ.ನ. ಉ. ಲೇ. ಬೆ. ಮಾ.)

ಓ.ಹೇ.ಕೇ. ಸ.ಇ.

ಅಧಿಕ ಹಿರಿಯ ಸಿವಿಲ್ ಜಡ್ಜ ಮತ್ತು ಜೆ.ಎಂ.ಎಫ್.ಸಿ
ಮಧುಗಿರಿ .